**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಮಾನ್ಯ ಶಾಸಕರು) ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

******

**ವಿಷಯ: "ಘಟಪ್ರಭಾ ಒಡಲು ಖಾಲಿ: ಜನ ರಾಸು ತತ್ತರ" ಎಂಬ ಶೀರ್ಷಿಕೆ ಅಡಿಯಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಬಾಗಲಕೋಟೆ ಜಿಲ್ಲೆಯ ಜನರ ಜೀವನಾಡಿ ಕೃಷ್ಣಾ, ಘಟಪ್ರಭಾ ನದಿಗಳಾಗಿವೆ. ನಮ್ಮ ಕಲಾದಗಿ ತಾಲೂಕಿನಲ್ಲಿ ಹರಿಯುವ ಘಟಪ್ರಭೆಗೆ ಅಡ್ಡಲಾಗಿ ಕಲಾದಗಿ-ಕಾತರಾಕಿ ಬ್ಯಾರೇಜ್ ನಿರ್ಮಾಣ ಮಾಡಲಾಗಿದ್ದು, ಈ ಭಾಗದ ಜನರಿಗೆ ಈ ಘಟಪ್ರಭೆ ನದಿಯೇ ಆಸರೆಯಾಗಿದೆ. ಕುಡಿಯುವ ನೀರಿಗೆ, ನೀರಾವರಿ ಸೇರಿದಂತೆ ಎಲ್ಲ ರೀತಿಯಿಂದಲೂ ಅನುಕೂಲವಾಗಿದೆ. ಆದರೆ ಈ ಬಿಸಿಲಿನ ಕಾಲದಲ್ಲಿ ಈಗ ಕಲಾದಗಿ - ಕಾತರಾಕಿ ಬ್ಯಾರೇಜ್ ನಲ್ಲಿ ನೀರು ಸಂಪೂರ್ಣ ಬತ್ತಿ ಹೋಗಿದ್ದು, ಈ ಭಾಗದ ಜನರಿಗೆ ಕುಡಿಯುವ ನೀರಿಗೆ, ಧನ-ಕರುಗಳಿಗೂ ಸಹ ನೀರಿಲ್ಲದೆ ಪರದಾಡುವಂತಾಗಿದೆ. ಸರ್ಕಾರವು ಇದರ ಬಗ್ಗೆ ಗಂಬೀರವಾಗಿ ಪರಿಗಣಿಸಬೇಕಿದೆ.**

**ಹಿಡಕಲ್ ಜಲಾಶಯದಿಂದ ಘಟಪ್ರಭಾ ಬಲದಂಡೆ ಕಾಲುವೆಯಿಂದ ನೀರು ಹರಿಸಿದ್ದರಿಂದ ಮುಧೋಳ ಭಾಗದಲ್ಲಿ ಸ್ವಲ್ಪ ನೀರು ಇದೆ. ಸಾಮಾನ್ಯವಾಗಿ ಈ ಬಿರು ಬೇಸಿಗೆ ಸಂದರ್ಭದಲ್ಲಿ ಹಿಡಕಲ್ ಡ್ಯಾಮ್ ನಿಂದ ನೀರು ಬಿಡಬೇಕಿತ್ತು, ಆದರೆ 2 ತಿಂಗಳಾದರೂ ಇನ್ನು ನೀರು ಬಡದೇ ಇರುವುದು ವಿಪರ್ಯಾಸ, ಹೀಗಾಗಿ ನಮ್ಮ ಬೀಳಗಿ ತಾಲೂಕು ಹಾಗೂ ಕಲಾದಗಿ ಸುತ್ತಮುತ್ತಲಿನ ಗ್ರಾಮಗಳು ಸೇರಿದಂತೆ ಅನೇಕ ಕಡೆಗಳಲ್ಲಿ ಹನಿ ನೀರು ಸಹ ಇಲ್ಲ, ಅತ್ಯಂತ ಬರದ ಬೀಡಾಗಿದೆ. ಹನಿ ನೀರಿಗೂ ಸಹ ಕಷ್ಟಪಡುವಂತಾಗಿದೆ. ಆದ್ದರಿಂದ ಈ ಭಾಗಕ್ಕೆ ಕುಡಿಯಲು ಹಾಗೂ ಧನ ಕರುಗಳಿಗೆ ನೀರಿಲ್ಲದೆ ಕಷ್ಟಪಡುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಕೂಡಲೇ ಗಮನಹರಿಸಿ ತಕ್ಷಣವೇ ಹಿಡಕಲ್ ಜಲಾಶಯದಿಂದ ನೀರು ಬಿಡಬೇಕು, ಈ ಭಾಗದ ರೈತಾಪಿ ವರ್ಗಕ್ಕೆ ಅನುಕೂಲ ಮಾಡಿ ಕೊಡುವ ಕುರಿತು.**

**ಉತ್ತರ:**

ದಿನಾಂಕ: 19.03.2025 ರಂದು ಹಿಡಕಲ್ ಜಲಾಶಯದಲ್ಲಿ 23.950 ಟಿ.ಎಂ.ಸಿ ನೀರು (Live Storage) ಲಭ್ಯವಿದ್ದು, ಕುಡಿಯುವ ನೀರಿಗಾಗಿ ಮೀಸಲಿರಿಸಿದ ಪ್ರಮಾಣದ ವಿವರಗಳು ಈ ಕೆಳಗಿನಂತಿದೆ.

| | | |
|---|---|---|
| **1** | Drinking water to Belagavi,Hukkeri, Sankeshwar and enrouting villages (Per day 60 cusecs ) (19.03.2025 to 31.07.2025 (135 Days) | 0.700 TMCft |
| **2** | Drinking water to Bagalkote & enrouting villages as per GO letter Dated: 09.10.2009 for April & May-2025 | 3.00 TMCft |
| **3** | Additional Drinking water to Bagalakote & enrooting villages April & May-2024 | 2.000 TMCft |
| **II** | Evaporation losses (Per Day 100 cusecs) (19.03.2025 to 31.07.2025 (135 Days) | 1.166 TMCft |
| | **Total Water requirement** | 6.866 TMCft |

ಪ್ರಸ್ತುತ 2024-25 ನೇ ಸಾಲಿನ ಹಿಂಗಾರು ಹಂಗಾಮಿನ ಅವಧಿ ಮುಗಿದಿದ್ದು, ಬಾಗಲಕೋಟೆ ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ ಸರ್ಕಾರದ ಆದೇಶ ದಿನಾಂಕ: 09.10.2009 ರಂತೆ 3.00 ಟಿ.ಎಂ.ಸಿ ನೀರನ್ನು ಹಾಗೂ ಪ್ರತಿ ವರ್ಷದ ಬೇಡಿಕೆಯಂತೆ ಹೆಚ್ಚುವರಿ 2.00 ಟಿ.ಎಂ.ಸಿ ನೀರನ್ನು ಸೇರಿ ಒಟ್ಟು 5.00 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿರುತ್ತದೆ. ಇದಲ್ಲದೇ ಬೆಳಗಾವಿ, ಹುಕ್ಕೇರಿ, ಸಂಕೇಶ್ವರ ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ ಕುಡಿಯುವ ನೀರು, ಬಾಷ್ಪೀಕರಣ, ಹೂಳಿನ ಶೇಖರಣೆ ಪ್ರಮಾಣ ಹೊರತುಪಡಿಸಿ **ಜಲಾಶಯದಲ್ಲಿ ಮುಂದಿನ ಮುಂಗಾರು ಪೂರ್ವ ಅವಧಿಯವರೆಗೆ ಅಥವಾ ವಾಡಿಕೆಯಂತೆ ಮಳೆಯಾಗುವವರೆಗೂ (ಜೂನ್-2025) 14.084 ಟಿ.ಎಂ.ಸಿ ನೀರು ಕುಡಿಯುವ ಉದ್ದೇಶಕ್ಕಾಗಿ ಲಭ್ಯವಿರುತ್ತದೆ.** ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದ ಅನುಸಾರ ನೀರನ್ನು ಕಾಯ್ದಿರಿಸಲಾಗಿದೆ. ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವವಾಗದಂತೆ ಜಲಾಶಯಗಳ ನೀರಿನ ಸಂಗ್ರಹಣೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಲು ಮತ್ತು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಲು ಅಯಾ ಪ್ರಾದೇಶಿಕ ಆಯುಕ್ತರ ಆಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು ಈ ಕುರಿತು ಪ್ರಾಧೇಶಿಕ ಆಯುಕ್ತರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಇವರಿಗೆ ಸೂಚನೆ ನೀಡಲಾಗಿರುತ್ತದೆ.

**ಸಂಖ್ಯೆ: ಜಸಂಇ 43 ಡಬ್ಲ್ಯೂಎಲ್ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**